ಮಧ್ಯಂತರ ಅರ್ಜಿ 3 ಮತ್ತು 4 ರ ಆದೇಶದ ಮೇರೆಗೆ ದಿನಾಂಕ: 27-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎಸ್.ಎಂ.ಹೆಚ. ಅರ್ಜಿದಾರ ಪರ ವಕೀಲರಿಂದಃ**

ಟ್ಯಾಕ್ಸ ಇನ್ವಾಯ್ಸನ್ನು ನಿಪಿ-19 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀ. ಎಂ.ಎ.ಹೆಚ್ 1 ಮತ್ತು 2ನೇ ಎದುರುದಾರ ಪರ ವಕೀಲರಿಂದಃ**

ನನ್ನ ಹುಟ್ಟಿದ ದಿನಾಂಕ 02-05-1998 ಇರುತ್ತದೆ. ನನ್ನ ಹುಟ್ಟಿನ ದಿನಾಂಕ ಸೂಚಿಸಲು ಶಾಲಾ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ಅಪಘಾತ ಆದ ಸಮಯದಲ್ಲಿ ನಾನು ದುರದಂಡಿಯಿಂದ ದುಂಡಾನಟ್ಟಿ ಕಡೆಗೆ ಮೋಟರ ಸೈಕಲ್ ಮೇಲೆ ಗೋಕಾಕ - ಯರಗಟ್ಟಿ ರಸ್ತೆಯ ಮೇಲೆ ಹೋಗುತ್ತಿದ್ದೆ. ನಾನು ದುರದುಂಡಿಯಿಂದ ಹೊರಟಾಗ ರಾತ್ರಿ 11-00 ಗಂಟೆ ಆಗಿತ್ತು. ದುರದಂಡಿಯಿಂದ ದುಂಡಾನಟ್ಟಿ ಹೋಗಬೇಕಾದಲ್ಲಿ ಗೋಕಾಕ ಮೇಲಿಂದ ಹೋಗಬೇಕು ಎಂದರೆ ಸರಿ. ದುರದಂಡಿಯಿಂದ ಗೋಕಾಕ 15.00 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸರಿ. ಗೋಕಾಕದಿಂದ ದುಂಡಾನಟ್ಟಿ 10-12 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸರಿ. ದುಂಡಾನಟ್ಟಿಯಿಂದ ದುರದಂಡಿಗೆ ಹೋಗಲು ಸುಮಾರು 1 ಗಂಟೆ 30 ನಿಮಿಷ ಸಮಯ ಬೇಕು ಎಂದರೆ ಸರಿ. ಗೋಕಾಕ - ಯರಗಟ್ಟಿ ರಸ್ತೆಯಲ್ಲಿ ರಾಜ್ಯ ಹೆದ್ದಾರಿ ಇರುವದರಿಂದ ಅಲ್ಲಿ ಯಾವಾಗಲೂ

ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಸಾಕಷ್ಟು ಅಗಲ ಇದೆ ಎಂದರೆ ಸರಿ.

ಅಪಘಾತ ಆದ ಸ್ಥಳದಿಂದ ದುಂಡಾನಟ್ಟಿ 2.00 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸರಿ. ಗೋಕಾಕ - ಯರಗಟ್ಟಿ ರಸ್ತೆಯ ಎರಡೂ ಬದಿಗೆ ಸಾಕಷ್ಟು ಖುಲ್ಲಾ ಜಾಗೆ ಇದೆ ಎಂದರೆ ಸರಿ. ದಿನಾಂಕ 17-07-2025 ರಂದು ಬಸ್ ನಂಬರ ಕೆಎ - 25- ಎಫ್- 782 ಕೆಟ್ಟಿದ್ದರಿಂದ ರಸ್ತೆಯ ಬದಿಗೆ ಖುಲ್ಲಾ ಇರುವ ಜಾಗೆಯಲ್ಲಿ ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಬಸ್ಸು ದಿನಾಂಕ 17-07-2025 ರಂದು ರಾತ್ರಿ 7 ಗಂಟೆ 40 ನಿಮಿಷದಿಂದ ರಸ್ತೆಯ ಬದಿಗೆ ಖುಲ್ಲಾ ಇರುವ ಜಾಗೆಯಲ್ಲಿ ನಿಂತಿತ್ತು ಎಂದರೆ ಸರಿಯಲ್ಲ. ರಾತ್ರಿ 7 ಗಂಟೆ 40 ನಿಮಿಷದಿಂದ ರಾತ್ರಿ 11-00 ಗಂಟೆಯವರೆಗೂ ಯಾವುದೇ ವಾಹನ ರಸ್ತೆ ಬದಿಗೆ ಖುಲ್ಲಾ ಇರುವ ಜಾಗೆಯಲ್ಲಿ ನಿಲ್ಲಿಸಿದ ಬಸ್ಸಿಗೆ ಅಪಘಾತ ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಸ್ಸ ಚಾಲಕ ಪಾರ್ಕಿಂಗ್ ಲೈಟ ಚಾಲು ಮಾಡಿ ರಸ್ತೆಯ ಬದಿಗೆ ಇರುವ ಖುಲ್ಲಾ ಜಾಗೆಯಲ್ಲಿ ಬಸ್ಸ ನಿಲ್ಲಿಸಿದ್ದರು ಎಂದರೆ ಸರಿಯಲ್ಲ.

ನನ್ನ ಮೋಟರ ಸೈಕಲ್‌ನ ಎಡ ಭಾಗವು ಬಸ್ಸಿನ ಬಲ ಭಾಗಕ್ಕೆ ಬಡಿದಿರುತ್ತದೆ. ಅಪಘಾತ ಆದ ಸಮಯದಲ್ಲಿ ಬಸ್ಸಿನ ಬಳಿ ಯಾರೂ ಇರಲಿಲ್ಲ. ಅಪಘಾತ ಆದ 10-15 ನಿಮಿಷದ ನಂತರ ಅಪಘಾತ ಆದ ಸ್ಥಳಕ್ಕೆ ಜನರು ಬಂದಿರುತ್ತಾರೆ ಅವರು ಯಾರು ಎಂದು ನನಗೆ ಹೇಳಲು ಬರುವುದಿಲ್ಲ.

ಈ ಅಪಘಾತದ ವಿಚಾರವಾಗಿ ನನ್ನ ಮಾವ ನಾನು ಹೇಳಿದ ಪ್ರಕಾರ ದೂರು ಕೊಟ್ಟಿರುತ್ತಾರೆ. ದೂರಿನಲ್ಲಿ ನಿಂತ ಬಸ್ಸಿಗೆ ನಾನೇ ನನ್ನ ಮೋಟರ ಸೈಕಲ್ ಅಪಘಾತ ಪಡಿಸಿದ್ದೇನೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಅಪಘಾತ ಆದ ಸಮಯದಲಿ ನಾನು ಚಾಲನೆ ಮಾಡುತ್ತಿದ್ದ ಮೋಟರ ಸೈಕಲ್‌ಗೆ ನಾನೇ

ಎಂ.ವಿ.ಸಿ. ನಂಃ 2505/2025
ಪಿ.ಡಬ್ಲ್ಯೂ-1 ( ವಿಠ್ಠಲ )

ಮಾಲೀಕ ಇರುತ್ತೇನೆ. ನನ್ನ ಮೋಟರ ಸೈಕಲ್‌ಗೆ ನಾನು ವಿಮೆ ಮಾಡಿಸಿದ್ದೇನೆ. ಮೋಟರ ಸೈಕಲ್ ಚಾಲನೆ ಮಾಡಲು ನನಗೆ ಚಾಲನಾ ಪತ್ರ ಇರುತ್ತದೆ ಅದನ್ನು ಹಾಜರು ಪಡಿಸಿರುತ್ತೇನೆ. ಅಪಘಾತ ಆದ ನಂತರ ಸ್ಥಳದಲ್ಲಿ ಇದ್ದ ಜನರು ನನ್ನನ್ನು ಚಿಕಿತ್ಸೆಗಾಗಿ ಎಸ.-4 ಆಸ್ಪತೆಗೆ ಕರೆದುಕೊಂಡು ಬಂದಿರುತ್ತಾರೆ. ಒಂದು ರಾತ್ರಿ ಎಸ್-4 ಆಸ್ಪತ್ರೆಯಲ್ಲಿದು ಮಾರನೆಯ ದಿನ ನನ್ನನ್ನು ಬೆಳಗಾವಿಯ KLE ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಬೆಳಗಾವಿಯ KLE ಆಸ್ಪತ್ರೆಯಲ್ಲಿ ನಾನು ಒಂದು ವಾರ ಒಳ ರೋಗಿಯಾಗಿ ದಾಖಲು ಆಗಿರುತ್ತೇನೆ. ನನಗೆ ಆರಾಮ ಆದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ.

ಬೆಳಗಾವಿಯ KLE ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ ನನ್ನ ಕಾಲಿಗೆ ಪುನಃ ನೋವು ಬಂದಿದ್ದರಿಂದ ಗೋಕಾಕನ ನಿಮ್ರಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಿಮ್ರಾ ಆಸ್ಪತ್ರೆಯಲ್ಲಿ ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ನಿಮ್ರಾ ಆಸ್ಪತ್ರೆಯಲ್ಲಿ ನಾನು 15 ದಿನ ಒಳರೋಗಿಯಾಗಿ ದಾಖಲು ಇದ್ದೆ. ನಿಮ್ರಾ ಆಸ್ಪತ್ರೆಯಿಂದ ಬಿಡುಗಡೆಯಾದಾಗಿನಿಂದ ನಾನು ಆರಾಮಾಗಿದ್ದೇನೆ ಎಂದರೆ ಸರಿ.

ನನ್ನ ಚಿಕಿತ್ಸೆಗೆ ಇಂತಿಷ್ಟು ದುಡ್ಡು ಖರ್ಚು ಆಗಿದೆ ಎಂದು ನಾನು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನನಗೆ ಒಡಾಡಲು ಕಷ್ಟ ಆಗುತ್ತಿದ್ದುದರಿಂದ ನಾನು ಕೃತಕ ಕಾಲು ಅಳವಡಿಸಿಕೊಂಡಿರುತ್ತೇನೆ. ಕೃತಕ ಕಾಲು ಅವಳಡಿಸಿಕೊಂಡಾಗಿನಿಂದ ನಾನು ಸರಿಯಾಗಿ ಒಡಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತಕ ಕಾಲು ಅಳವಡಿಸಿದವರು 1 ತಿಂಗಳ ನಂತರ ನನಗೆ ಸರಿಯಾಗಿ ಒಡಾಡಲು ಬರುತ್ತದೆ ಎಂದು ಹೇಳಿರುತ್ತಾರೆ.

ನಾನು ಬೇರೆಯವರ ಜಮೀನದಲ್ಲಿ ವ್ಯವಸಾಯ ಮಾಡುತ್ತೇನೆ ಹಾಗೂ ಗೂಡ್ಸ ವಾಹನ ಚಾಲನೆ ಮಾಡುತ್ತೇನೆ. ಈಗಲೂ ಸಹ ನಾನು ವ್ಯವಸಾಯ ಮಾಡುತ್ತೇನೆ ಮಾ ಗೂಡ್ಸ ವಾಹನ ಚಾಲನೆ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ. 30,000/- ಆದಾಯ ಬರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ನಾನೇ ನನ್ನ ಮೊಟರ ಸೈಕಲ್‌ನ್ನು ಅತೀ ವೇಗ ಮತ್ತು ನಿರ್ಲಕ್ಷ್ಯ ತನದಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಬದಿಗೆ ಇದ್ದ ಖುಲ್ಲಾ ಗಾಜದಲ್ಲಿ ನಿಲ್ಲಿಸಿದ್ದ ಬಸ್ಸಿಗೆ  ಅಪಘಾತ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ತನಿಖೆ ಮಾಡಿ ಈ ಅಪಘಾತವು ನನ್ನ ನಿರ್ಲಕ್ಷ್ಯ ತನದಿಂದ ಸಂಬಂವಿಸಿದೆ ಎಂದು ಹೇಳಿ ನನ್ನನ್ನು 1ನೇ ಆರೋಪಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ನಿರ್ಲಕ್ಷ್ಯ ತನದಿಂದ ಸಂಬವಿಸಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಂರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರನೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ